ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಬೆಂಡಿಗಾನಹಳ್ಳಿ ಹತ್ತಿರ 23 ಎಕರೆ ಜಮೀನು ಡಿನೋಟಿಫೈ ಮಾಡಿರುವುದು

+ ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದಿಂದ ಉತ್ತರ ಕೊಡುವವರಿದ್ದಾರೆ. ನಿನ್ನೆ ನಮ್ಮ ನಾಯಕರಾದ ಯಡಿಯೂರಪ್ಪನವರು ಮಾತನಾಡಿದ್ದರು. ಆ 23 ಎಕರೆ ಸಿ.ವಿ. ರಾಮನ್ ನಗರದ ಹತ್ತಿರ ಡಿ ನೋಟಿಫೈ ಮಾಡಿರತಕ್ಕಂಥಾದ್ದರ ಬಗ್ಗೆ ನನಗೆ ಗೊತ್ತಿರುವುದನ್ನು ನಾನು ಹೇಳಿಬಿಡಬೇಕಾಗುತ್ತದೆ. ಏಕೆಂದರೆ ಸರ್ಕಾರದವರು ಎದ್ದು ನಾನು ಒಂದು ಪತ್ರ ಬರೆದಿದ್ದೆ ಇದಕ್ಕೆ ನಿಮ್ಮ ಪಕ್ಷದವರೇ ಡಿನೋಟಿಫೈ ಮಾಡಿ ಎಂದು ಪತ್ರ ಬರೆಯುವುದು ನೀವ ಇಲ್ಲಿ ಟೀಕೆ ಮಾಡುವುದು ಎಂದು ಅವರು ಹೇಳಬಾರದು. ನಾನು ಸ್ವಲ್ಪ ವಿವರ ಹೇಳಬೇಕಾಗಿದೆ. ಅದು ಸರ್ ಸಿ.ವಿ. ರಾಮನ್ ನಗರ ಅಲ್ಲ, ಬೆಂಡಿಗಾನಹಳ್ಳಿ, 200 ಎಕರೆ ಜಮೀನನ್ನು ಡಿ.ಆರ್.ಡಿ.ಓ.ನವರು ಕೇಳಿದ್ದರು. ಏತಕ್ಕೆ ಅಂದ್ರೆ ರಿಸರ್ಚ್‌ಡೆವಲಪ್‌ಮೆಂಟ್ ಕೆಲಸಕ್ಕೆ ಅಲ್ಲ ವಸತಿಗೆ ಎಂದು ಕೇಳಿದ್ದರು. ಬೇರೆ ಕೆಲಸಕ್ಕೆ 3 ಸಾವಿರ ಎಕರೆ 23 ಕಿಲೋಮಿಟರ್ ದೂರದಲ್ಲಿ ಅವರು ಅಕ್ವೈರ್ ಮಾಡಿಕೊಂಡಿದ್ದಾರೆ. ಇಲ್ಲಿ ಮನೆಗಳಿಗೆ ಎಂದು ಕೇಳಿದ್ದರು. ಇಲ್ಲಿ ಕೇಳಿದಂತಹ ಕಾಲದಲ್ಲಿ ಏನಾಯಿತು ಅಂದರೆ ಬೆಂಡಿಗಾನಹಳ್ಳಿ, ನಾರಾಯಣಪುರ ಕಗ್ಗಾದಾಸನಪುರ, ಈ ಮೂರು ಊರುಗಳು ಸೇರಿದಂತೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದರು. ತದನಂತರ ಏನಾಯಿತು ಎಂದರೆ ಬಿ. ನಾರಾಯಣಪುರಕ್ಕೆ ಸೇರಿದ್ದು ಕಗ್ಗದಾಸನಪುರಕ್ಕೆ ಸೇರಿದ್ದೆಲ್ಲಾ ಡಿ ನೋಟಿಫೈ ಆಗಿ ಹೋಯಿತು. ಡಿ ನೋಟಿಫೈ ಆದ ಮೇಲೆ ಏನು ಮಾಡಿದರು ಅಂದ್ರೆ ಇದು 1983 ರಿಂದ ನಡೆದುಕೊಂಡು ಬರುತ್ತಿದೆ. ಈ ಗ್ರಾಮಸ್ಥರದ್ದು ಹಾಗೆಯೇ ಉಳಿದುಕೊಂಡಿತು. ಕಡಿದಾಳ್ ಮಂಜಪ್ಪನವರೆ ಇದನ್ನು ಮೊದಲು ಕೋರ್ಟಿಗೆ ಹಾಕಿದರು. ರೈತರ ಪರವಾಗಿ ಅದನ್ನು ಹೇಳುತ್ತೇನೆ.

ಡಿ ಆರ್ ಡಿ ಓ ನವರು ಏನು ಮಾಡಿದರು ಎಂದರೆ ಇದಕ್ಕೆ ಬದಲಾಗಿ 200 ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. 12 ಅಡಿ ಸುತ್ತಾ 200 ಎಕರೆಗೆ ಕೋಟೆ ಕಟ್ಟಿಬಿಟ್ಟಿದ್ದಾರೆ. ಆ 200 ಎಕರೆಯಲ್ಲಿ 20 ಎಕರೆ ಉಪಯೋಗಿಸಿಕೊಂಡಿದ್ದಾರೆ, ಇನ್ನೂ 180 ಎಕರೆ ಖಾಲಿ ಇದೆ ಅದು ಅವರ ಸುಪರ್ದು ಇರತಕ್ಕಂತಾದ್ದು. ಇಷ್ಟೆಲ್ಲಾ ನಡೆಯುವಂತಹ ಕಾಲದಲ್ಲಿ ಏನಾಯಿತು, ನನ್ನ ಹತ್ತಿರ ಬಂದರು. ಈ 23 ಎಕರೆ ಡಿ ನೋಟಿಫೈ ಎಂದು ಹೇಳಿದರಲ್ಲ, 37 ಜನ ಅದರಲ್ಲಿ ಒಬ್ಬರಿಗೆ ಇಪ್ಪತ್ತೂವರೆ ಗುಂಟೆ ಇದೆ. ಒಬ್ಬರಿಗೆ 13 ಗುಂಟೆ ಇದೆ, ಒಬ್ಬರಿಗೆ ಹನ್ನೆರಡೂವರೆ ಗುಂಟೆ ಇದೆ. ಒಬ್ಬರಿಗೆ 18 ಗುಂಟೆ ಇದೆ. ಒಬ್ಬರಿಗೆ ಒಂಭತ್ತೂವರೆ ಗುಂಟೆ ಇದೆ. ಇನ್ನೊಬ್ಬರಿಗೆ ಇಪ್ಪತ್ತೂವರೆ ಗುಂಟೆ ಇದೆ, ಹದಿನೈದೂವರೆ ಗುಂಟೆ ಇದೆ. 4-5 ಜನ ಬಿಟ್ಟರೆ

* ಅನುಬಂಧ-2

ಎಲ್ಲರೂ ಒಂದು ಎಕರೆ ಒಳಗೆ ಇರುವವರೇ, ಅದರಲ್ಲಿ ಒಬ್ಬರದ್ದು ಮಾತ್ರ 3 ಎಕರೆ 38 ಗುಂಟೆ ಇದೆ. ನಾನು ಇದನ್ನು ಸೇರಿಸುವುದಕ್ಕೆ ಒಲ್ಲೇ. ಆಗ ಅವರು ಹೇಳಿದರು ಇಲ್ಲಾ ಸಾರ್ ಚಿಕ್ಕತಾಯಪ್ಪ ಎಂಬಾತನಿಗೆ 107 ವರ್ಷ ವಯಸ್ಸಾಗಿದೆ ಅವರ ಮನೆಯಲ್ಲಿ ಕೇವಲ 45-50 ಜನ ಇದ್ದಾರೆ ಅಷ್ಟು ಜನರಿಗೆ ಅವತ್ತಿನ ರೇಟ್‌ನಲ್ಲಿ ಭಾರಿ ಕಡಿಮೆ ಪರಿಹಾರ. ನಾನು ಏಕೆ ಹೇಳುತ್ತೇನೆ ಎಂದರೆ ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಜಾಲಪ್ಪನವರನ್ನು ಅಭಿನಂದಿಸುತ್ತೇನೆ ಈ ವಿಚಾರದಲ್ಲಿ ಗುಣಕ್ಕೆ ಮತ್ಸರ ಪಡತಕ್ಕಂಥಾದ್ದು ಅಲ್ಲ. ರೈತರ ಪರ ನಿಂತವರು. ಇದು ಹೇಗೆ ಅಂದ್ರೆ ಇದು ಅರ್ಥವಾಗಬೇಕಾದರೆ ನಾನು ಹೇಳಿಬಿಡುತ್ತೇನೆ.

ಈ ಡಿ ಆರ್ ಡಿ ಒ ನವರು ತೆಗೆದುಕೊಂಡಿರುವುದು ಕಬ್ಬನ್ ಪಾರ್ಕ್ ಎಂದು ಇಟ್ಟುಕೊಳ್ಳಿ ಅದು ಈಗ ಅವರು ಇರುವ ಸ್ಥಳ. ಆಮೇಲೆ ಇಲ್ಲಿ ಈ ಕಗ್ಗದಾಸನ ಪುರ ನಾರಾಯಣಪುರ ಈ ವಿಧಾನ ಸೌಧಕ್ಕೆ ಬಂದಂಗೆ ಆಗುತ್ತದೆ. ಬೆಂಡಿಗಾನಹಳ್ಳಿ ಈಗ ನೋಟಿ ಫೈ ಮಾಡಿರುವುದು ರಾಜಭವನಕ್ಕೆ ಬಂದಂತೆ ಆಗುತ್ತದೆ. ಎಂದರೆ ಅವರು ಬೆಂಡಿಗಾನ ಹಳ್ಳಿಗೆ ಏನಾದರೂ ಬರಬೇಕಾದರೆ ಕಗ್ಗದಾಸನಪುರ ನಾರಾಯಣಪುರ ಹಾರಿ ಬರಬೇಕು. ಈ ಬಡವರ ಜಮೀನು ಹತ್ತಿರ ಬರಬೇಕಾದರೆ ಅದು ಅಲ್ಲದೇ ಅವರಿಗೆ ಬೇರೆ ಲ್ಯಾಂಡ್ ಕೊಟ್ಟಿದ್ದಾರೆ. ಮೂಲತಃ ಈ ರೈತರ ಜಮಿನನ್ನು ಅಕ್ವೈರ್ ಮಾಡಿಕೊಂಡು ವಸತಿಗೆ ಕೊಡುವುದು ಇದೆಯಲ್ಲ ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಎಷ್ಟು ಆರ್ಗನೈಜೇಷನ್ಸ್‌ಗೆ ನಾವು ಕೊಟ್ಟಿದ್ದೇವೆ ಎಷ್ಟು ಜನ ಲಾಭಕ್ಕೆ ಮಾರಿಕೊಂಡಿದ್ದಾರೆ ರೈತರ ಸಮಾಧಿ ಮೇಲೆ ಸೌಧ ಕಟ್ಟುವುದು ಆಗಬಾರದು. ಅದು ಆಗತಕ್ಕದ್ದು ಅಲ್ಲ. ತಾವು ಏರ್ ಪೋರ್ಟ್‌ಗೆ ಲ್ಯಾಂಡ್ ಅಕ್ವೈರ್ ಮಾಡುವುದಕ್ಕೆ ನಾನು ಸುಪ್ರೀಂ ಕೋರ್ಟ್‌ಗೆ ಹಾಕಿದ್ದೇನೆ ಅದು ಡಬ್ಬಲ್ ಬೆಂಚ್‌ಗೆ ಹೋಯಿತು. ಸಿಂಗಲ್ ಬೆಂಚ್ ಆಯಿತು ಡಬ್ಬಲ್ ಬೆಂಚ್‌ಗೆ ಅಪೀಲು ಹಾಕಿದೆ ಅದು ಹೋಯಿತು. ಈಗ ಸುಪ್ರೀಂ ಕೋರ್ಟ್‌ಗೆ ಹಾಕಿದ್ದೇವೆ. ರೈತರ ಪರ ನಾವು ನಿಲ್ಲಬೇಕಾಗುತ್ತದೆ. ಈ ಕಾರಣದಿಂದ ಈ 35 ಜನಕ್ಕೆ ಏನು ಡಿ ನೋಟಿಫೈ ಮಾಡಿದ್ದಾರೆ ನಾನು ದಿನಾಂಕ 4-8-95 ರಂದು ಜಾಲಪ್ಪನವರಿಗೆ ಕಾಗದ ಬರೆದಿದ್ದ ಜಾಲಪ್ಪನವರು ಹೋಗಿ ಸ್ಥಳ ಮಹಜರ್ ಮಾಡಿ ಇದೆಲ್ಲಾ ಅವರಿಗೆ ಅನ್ಯಾಯ ಆಗಿದೆ ಎಂದು ತಿಳಿದುಕೊಂಡು, ಇವರೆಲ್ಲ ಬಡವರು ಇದ್ದಾರೆ ಎಂದು ತಿಳಿದುಕೊಂಡು ಅದನ್ನು ಡಿ ನೋಟಿಫೈ ಮಾಡಿದ್ದಾರೆ ಇದಕ್ಕೆ ನಾನು ಕ್ಲಾರಿಫೈ ಮಾಡಿದೆ ಅಷ್ಟೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತಿದ್ದೇನೆ. 6. ವಿತ್ತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗ್ರಾಮಾಂತರ ನೀರು ಸರಬರಾಜು ನೈರ್ಮಲೀಕರಣಗಳ ಬೇಡಿಕೆಗಳನ್ನು ವಿರೋಧಿಸಿ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಮಾನ್ಯ ಅಧ್ಯಕ್ಷರೇ, ನಮ್ಮ ದೇಶ, ನಮ್ಮ ರಾಜ್ಯ, ಗ್ರಾಮೀಣ ಪ್ರದೇಶಗಳಿಂದಲೇ ಹೆಚ್ಚಾಗಿ ಕೂಡಿಕೊಂಡಿರುವ ಪ್ರದೇಶ. ನಮ್ಮ ದೇಶದ ಒಟ್ಟು ಜನಸಂಖ್ಯೆಯು ಶೇಕಡ 70ರಷ್ಟು ಗ್ರಾಮಾಂತರ ಪ್ರದೇಶಗಳಿಂದಲೇ ಆವರಿಸಿಕೊಂಡಿದೆ. ಹೆಚ್ಚಾಗಿ ಗ್ರಾಮಾಂತರ